**ಸಾಕ್ಷಿಗೆ ದಿನಾಂಕಃ 20.06.2026 ರಂದು ಪ್ರಮಾಣ ಮಾಡಿಸಲಾಯಿತು.**

**<u>ಪಾಟೀ ಸವಾಲುಃ ಶ್ರೀ. ಜಿ.ಆರ್. ವಕೀಲರಿಂದಃ</u>**

ನಾನು ಪಿ.ಯು..ಸಿ.ತನಕ ಓದಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ದಾವೆಯಲ್ಲಿ ಕೇಳಿರುವ ಪರಿಹಾರದ ಬಗ್ಗೆ ನನಗೆ ಗೊತ್ತು. ವಾದಪತ್ರವನ್ನು ಮತ್ತು ಪ್ರತಿವಾದ ಪತ್ರವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. 1 ನೇ ಪ್ರತಿವಾದಿ ನಮ್ಮ ತಂದೆ. 5 ನೇ ಪ್ರತಿವಾದಿ ನನಗೆ ಸಹೋದರ. ಟಿ.ನರಸೀಪುರ ತಾಲ್ಲೂಕು, ತಲಕಾಡು ಹೋಬಳಿ, ವಿಜಯಪುರ ಗ್ರಾಮದಲ್ಲಿರುವ ಜಂಜರ್ ಸಂಖ್ಯೆ 33 ಸ್ವತ್ತಿನ ಸಂಖ್ಯೆ 33 ರ ವಿಸ್ತೀರ್ಣ 40x 60 ನಮ್ಮ ತಂದೆಗೆ ಸೇರಿರುತ್ತದೆ ಎಂದರೆ ಸರಿ. ಸದರಿ ಸ್ವತ್ತು ಬಿ.ಶೆಟ್ಟಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಖಾತೆ ಆಗಿರುತ್ತದೆ ಎಂದರೆ ಸರಿ. ನಮ್ಮ ತಂದೆ ಮತ್ತು 5 ನೇ ಪ್ರತಿವಾದಿಯು ದಾವಾ ಸ್ವತ್ತನ್ನು 2 ನೇ ವಾದಿಯ ತಂದೆ ಸಣ್ಣಯ್ಯ ನವರಿಗೆ ದಿ.11.11.1999 ರಂದು ಪಂಚಾಯಿತಿ ಕ್ರಯಪತ್ರದಂತೆ 20x50 ಅಡಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರದಂತೆ ಅವರ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ಸರಿಯಲ್ಲ. ದಿ.11.11.1999 ರಿಂದ 01.09.2023 ರವರೆಗೆ ಸದರಿ ಸಣ್ಣಯ್ಯ ನವರು ಸದರಿ ಸ್ವತ್ತಿನ ಸ್ವಾಧೀನಾನುಭವವನ್ನು ಹೊಂದಿದ್ದರು ಎಂದರೆ ಸರಿಯಲ್ಲ. ದಿ.01.09.2023 ರಂದು ಸದರಿ ಸ್ವತ್ತನ್ನು 2 ನೇ ಪ್ರತಿವಾದಿಗೆ ಸದರಿಯವರು ವಹಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

2 ನೇ ವಾದಿ ಮತ್ತು ಅವರ ತಂದೆ ಸಣ್ಣಯ್ಯನವರು 1 ನೇ ವಾದಿಯ ಹೆಸರಿಗೆ ಸದರಿ ಸ್ವತ್ತಿನ ಖಾತೆಯನ್ನು ಮಾಡಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 1 ನೇ ವಾದಿಯ ಹೆಸರಿಗೆ ಇಂದ್ರ ಆವಾಸ್ ಯೋಜನೆಯಡಿ ಮನೆಯು ಸಹ ಮಂಜೂರು ಆಗಿತ್ತು ಎಂದರೆ ಸರಿಯಲ್ಲ. ಸಂಬಂಧಪಟ್ಟ ಗ್ರಾಮಪಂಚಾಯಿತಿಯವರು 1 ನೇ ವಾದಿಯಿಂದ ದಾಖಲೆಯನ್ನು ಪಡೆದು ಮಂಜೂರು ಮಾಡಿದ್ದರು ಎಂದರೆ ಸರಿಯಲ್ಲ. ವಾದಿಗಳ ಹಾಗೂ ಅವರ ತಂದೆಯ ಸಮ್ಮತಿಯನ್ನು ಪಡೆಯದೆ ಗ್ರಾಮಪಂಚಾಯಿತಿಯವರು ಸಣ್ಣಯ್ಯನ ಹೆಸರಿನಲ್ಲಿದ್ದ ಖಾತೆಯನ್ನು ರೌಂಡ್ ಅಪ್ ಮಾಡಿ ನಮ್ಮ ತಂದೆಯ ಹೆಸರಿಗೆ ಖಾತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.1 ರಲ್ಲಿ ದಾವಾ ಸ್ವತ್ತಿನ ಖಾತೆಯು 2 ನೇ ವಾದಿಯ ತಂದೆಯ ಹೆಸರಿನಲ್ಲಿ ನಮೂದು ಇರುತ್ತದೆ ಎಂದರೆ ಸರಿಯಲ್ಲ. ಸದರಿ ವಿಚಾರ ನನಗೆ ಗೊತ್ತಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಕ್ರಯಪತ್ರದ ಆಧಾರದ ಮೇಲೆ 2 ನೇ ವಾದಿಯ

ತಂದೆಯ ಹೆಸರಿಗೆ ದಾವಾ ಸ್ವತ್ತಿನ ಖಾತೆ ನಮೂದು ಆಗಿತ್ತು ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಕಬಳಿಸುವ ಸಲುವಾಗಿ ನನ್ನ ಗಂಡ ಹಾಗೂ ಪಂಚಾಯಿತಿಯವರು ದಾಖಲೆಗಳನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ವಾದಿಗಳು ತಾಲ್ಲೂಕು ಪಂಚಾಯಿತಿಯಲ್ಲಿ ಅಪೀಲು ಸಲ್ಲಿಸಿದ್ದರು ಎಂದರೆ ಸರಿ. ಈ ಸಂಬಂಧ ಗ್ರಾಮ ಪಂಚಾಯಿತಿಯಲ್ಲಿ ಮಾತುಕತೆ ಆಗಿರುತ್ತದೆ ಎಂದರೆ ಸರಿಯಲ್ಲ. ನಾವು ದಾವಾ ಸ್ವತ್ತಿನಲ್ಲಿ ಅಕ್ರಮವಾಗಿ ಪಾಯವನ್ನು ಹಾಕಲು ಪ್ರಯತ್ನಿಸಿರುತ್ತೇವೆ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿಯು ವಿಜಯಪುರ ಗ್ರಾಮ ಪಂಚಾಯಿತಿಯ ಸದಸ್ಯರು ಎಂದರೆ ಸರಿ. ಸದರಿಯವರು ತಮ್ಮ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡು ಖಾತೆಯನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈಗಲೂ ವಾದಿಗಳು ದಾವಾ ಸ್ವತ್ತಿನ ಸ್ವಾಧೀನಾನುಭವವನ್ನು ಹೊಂದಿರುತ್ತಾರೆ ಎಂದರೆ ಸರಿಯಲ್ಲ. ನಿ.ಡಿ.1 ನ್ನು ಇ.ಓ. ಕಛೇರಿಯಿಂದ ಪಡೆದಿರುತ್ತೇವೆ. ಸದರಿ ದಾಖಲೆಯನ್ನು ಸದರಿ ಕಛೇರಿಯಲ್ಲಿ ನಮ್ಮ ವಕೀಲರು ಪಡೆದಿರುತ್ತಾರೆ. ಸದರಿ ದಾಖಲೆಯನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ದಾಖಲೆಯಲ್ಲಿ ನಮೂದು ಮಾಡಿರುವ ನಿವೇಶನದ ಸಂಖ್ಯೆ 39 ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

(ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು)

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**